**ಸಾಕ್ಷಿಗೆ ದಿನಾಂಕ 26-07-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ VCMP ವಕೀಲರಿಂದ**

ಅರ್ಜಿದಾರ ನನ್ನ ಮಗ. ಅಪಘಾತವಾದಾಗ ನನ್ನ ಮಗನಿಗೆ 16 ವರ್ಷವಾಗಿತ್ತು. ನನ್ನ ಮಗನ ಆಧಾರ್ ಕಾರ್ಡ್ ದಾಖಲೆ ಹಾಜರುಪಡಿಸಿರುತ್ತೇನೆ. ಅಪಘಾತವಾಗಿ 2 ವರ್ಷ 8 ತಿಂಗಳು ಆಗಿರುತ್ತದೆ. ಅಪಘಾತ ಸಮಯದಲ್ಲಿ ನನ್ನ ಮಗ ಶಾಲೆಗೆ ಹೋಗುತ್ತಿದ್ದ. ನನ್ನ ಮಗ ಇಜೇರಿ ಸರಕಾರಿ ಶಾಲೆಗೆ ಹೋಗುತ್ತಿದ್ದ. ನನ್ನ ಮಗ ಕುರಿ ಕಾಯುವ ಕೆಲಸ ಮಾಡಿ ಪ್ರತಿ ತಿಂಗಳು 15 ಸಾವಿರ ಗಳಿಸುತ್ತಿದ್ದ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಮಗೆ ಸೇರಿದ 5-6 ಕುರಿಗಳಿವೆ ಸದರಿ ಕುರಿಗಳನ್ನು ಈಗ ನಮ್ಮ ಯಜಮಾನರು ಕಾಯುತ್ತಾರೆ. ನನ್ನ ಮಗನಿಗೆ ಅಪಘಾತದ ಸಮಯದಲ್ಲಿ ಸದರಿ ಕುರಿಗಳನ್ನು ನನ್ನ ಯಜಮಾನರೇ ಕಾಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗ ಶಾಲೆಗೆ ಹೋಗುತ್ತಿದ್ದ ಆತನಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಅಪಘಾತದ ಸಮಯದಲ್ಲಿ ಕುರಿ ಕಾಯಲು ಒಬ್ಬನೇ ಹೋಗುತ್ತಿದ್ದ. ನನ್ನ ಮಗ ಕುರಿ ಕಾಯಲು ಹೋಗುತ್ತಿದ್ದಾಗ ಹಿಂದಿನಿಂದ ಒಂದು ಟ್ರ್ಯಾಕ್ಟರ್ ಬಂದು ಜಂಪ್ ಆಗಿ ಡಿಕ್ಕಿಯಾದ ಕಾರಣ ಅಪಘಾತವಾಗಿರುತ್ತದೆ. ನನ್ನ ಮಗನಿಗೆ ಅಪಘಾತವಾದ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ನನಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ನನ್ನ ಮಗನಿಗೆ ಅಪಘಾತವಾದ ವಿಚಾರವನ್ನು ಹುನ್ನಪ್ಪ ತಂದೆ ಜಯಪ್ಪ ಹೇಳಿರುತ್ತಾರೆ.

ಪೊಲೀಸರಿಗೆ ದೂರನ್ನು ನಾನೇ ನೀಡಿರುತ್ತೇನೆ.ನಾನು ಆಸ್ಪತ್ರೆಯಲ್ಲಿ ಮಗನ ಜೊತೆಗೆ ಇದ್ದ ಕಾರಣ ದೂರನ್ನು ಅಪಘಾತವಾದ 5-6 ದಿನಗಳ ನಂತರ ನೀಡಿರುತ್ತೇವೆ. ದೂರನ್ನು ನನ್ನ ಮಗ ಆಸ್ಪತ್ರೆಯಲ್ಲಿದ್ದ ಸಮಯದಲ್ಲಿ ನೀಡಿರುತ್ತೇನೆ.

ಅಪಘಾತವಾದ ನಂತರ ನನ್ನ ಮಗನನ್ನು ಕುರಾಳ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ. ನನ್ನ ಮಗನಿಗೆ ಅಪಘಾತಪಡಿಸಿದ ವಾಹನದ ಮಾಲೀಕರು ಹಣ ನೀಡಲ್ಲ ಅಂತಾ ಹೇಳಿದ ಕಾರಣ ಪ್ರಕರಣ ದಾಖಲಿಸಿರುತ್ತೇವೆ.

ನನ್ನ ಮಗನಿಗೆ ಅಪಘಾತ ಟ್ರ್ಯಾಕ್ಟರ್ ವಾಹನದ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಆಸ್ಪತ್ರೆಯಲ್ಲಿ 5-6 ದಿನಗಳವರೆಗೆ ಇದ್ದ. ನನ್ನ ಮಗನಿಗೆ ಅಪಘಾತದಿಂದ ಯಾವುದೇ ಗಾಯವಾಗಿರದ ಕಾರಣ ಆಸ್ಪತ್ರೆಯವರು MLC ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ತನ್ನಿಂದ ತಾನೇ ಗಾಯ ಮಾಡಿಕೊಂಡಿರುತ್ತಾನೆಂದರೆ ಸರಿಯಲ್ಲ. ನಾವು, ವಾಹನದ ಮಾಲೀಕ ಮತ್ತು ಪೊಲೀಸರು ಸೇರಿ ಸದರಿ ಟ್ರ್ಯಾಕ್ಟರ್ ವಾಹನದ ಮೇಲೆ ಸುಳ್ಳು ಪ್ರಕರಣ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ಆ

ದಿನ ಟ್ರ್ಯಾಕ್ಟರ್ ಚಾಲಕ ಟ್ರ್ಯಾಕ್ಟರನ್ನು ನನ್ನ ಮಗನ ಹಿಂದಿನಿಂದ ಬಂದು ಡಿಕ್ಕಿಪಡಿಸಿರುತ್ತದೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಟ್ರ್ಯಾಕ್ಟರ್ ಮೇಲೆ ಸುಳ್ಳು ಪ್ರಕರಣ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ನನ್ನ ಮಗನ ಸೊಂಟಕ್ಕೆ ಗಾಯವಾಗಿರುತ್ತದೆ. ಸಾಕ್ಷಿ ಮುಂದುವರೆದು ನನ್ನ ಮಗನಿಗೆ ನಡೆಯಲು ಕೂಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗನಿಗೆ ಸಾದಾ ಗಾಯಗಳಾಗಿದ್ದವು ಸದರಿ ಗಾಯಗಳು ವಾಸಿಯಾಗಿರುತ್ತವೆಂದರೆ ಸರಿಯಲ್ಲ.

ನಿಪಿ-8ರ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಸೃಷ್ಟಿಸಿಕೊಂಡು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಿಪಿ-11 ಮತ್ತು 12ರ ದಾಖಲೆಯ ಮೇಲೆ ರೋಗಿಯ ಸಂಖ್ಯೆ OPD, GST & CST ನಂಬರ್ ಇಲ್ಲ ಎಂದರೆ ಸರಿಯಲ್ಲ. ನಿಪಿ-11 ರಿಂದ 14ರ ದಾಖಲಾತಿಗಳನ್ನು ಈ ಪ್ರಕರಣಕ್ಕೆ ಸಹಾಯವಾಗಲೆಂದು ಸೃಷ್ಟಿಸಿಕೊಂಡು ಬಂದು ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ಬೇರೆ ಆಸ್ಪತ್ರೆಯ ಬಿಲ್ ಮತ್ತು ವೈದ್ಯಕೀಯ ಬಿಲ್ ಈ ಪ್ರಕರಣಕ್ಕೆ ಸಹಾಯವಾಗಲೆಂದು ಸೃಷ್ಟಿಸಿಕೊಂಡು ಬಂದು ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ನನ್ನ ಮಗನ ಹೆಚ್ಚಿನ ಚಿಕಿತ್ಸೆಗಾಗಿ ಇನ್ನೂ ಒಂದೂವರೆ ಲಕ್ಷ ಬೇಕು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಬರೆದಷ್ಟು ಮೊತ್ತಕ್ಕೆ ಯಾವುದೇ ಆಧಾರ ಇಲ್ಲ ಅಂದಾಜಿನ ಮೇಲೆ ಬರೆಸಿರುತ್ತೇವೆಂದರೆ ಸರಿಯಲ್ಲ. ನಿಪಿ- 3ರ ದಾಖಲೆಗೆ ಲಗತ್ತಿಸಿದ ನಕಾಶೆಯಲ್ಲಿ ಅಪಘಾತವು ನಡುರಸ್ತೆಯಲ್ಲಿ ಆಗಿದೆ ಎಂದು ತೋರಿಸಲಾಗಿದ್ದು ಅಪಘಾತವು ನನ್ನ ಮಗನ ತಪ್ಪಿನಿಂದಾಗಿರುತ್ತದೆ ಎಂದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

**ಪಾಟಿ ಸವಾಲುಃ 1ನೇ ಎದುರುದಾರು ಮತ್ತು 1ನೇ ಎದುರುದಾರರ ಪರ ವಕೀಲರನ್ನು ಕರೆಯಿಸಲಾಗಿ ಅವರು ಗೈರು ಹಾಜರು ಇರುವ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಜೇವರ್ಗಿ